**ಒಎಸ್ ಸಂ.ಃ84/2012**
**ಡಿಡಬ್ಲ್ಯೂ ಃ 2 (ವರದಪ್ಪ)**
**ದಿನಾಂಕ 19-08-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂಎಸ್ಎಂ ವಕೀಲರಿಂದ

ಮುನಿಸ್ವಾಮಿ ಮತ್ತು ಅಕ್ಕಮ್ಮನಿಗೆ ದೊಡ್ಡಲಕ್ಷ್ಮಮ್ಮ ಮತ್ತು ಚಿಕ್ಕಲಕ್ಷ್ಮಮ್ಮ ಎಂಬ ಮಕ್ಕಳು. ವಾದ ಪತ್ರದಲ್ಲಿ ಮುನಿಸ್ವಾಮಿ ಮತ್ತು ಅಕ್ಕಮ್ಮನ ಮಕ್ಕಳು ಲಕ್ಷ್ಮಮ್ಮ ಮತ್ತು ಲಕ್ಷ್ಮಮ್ಮ ಎಂದು ಇದೆ ಎಂದರೆ ಸಾಕ್ಷಿಯು ಅದನ್ನು ವಾದಿ ಬರೆಸಿರುವುದು ಎಂದು ಹೇಳುತ್ತಾರೆ. ಐಟಂ ನಂ. 1 ರಿಂದ 8 ರ ಅರ್ಧ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಎಲ್ಲಾ ಸ್ವಾಧೀನದಲ್ಲಿದ್ದೇವೆ ಎಂದು ಹೇಳುತ್ತಾರೆ. ಮುನಿಸ್ವಾಮಿಯವರು ತೀರಿಕೊಂಡ ನಂತರ ಮುನಿಯಮ್ಮ ಮತ್ತು ಲಕ್ಷ್ಮಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಮುನಿಯಮ್ಮ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ಮುನಿಯಮ್ಮ ತೀರಿಕೊಂಡ ನಂತರ ವಾದಿ, ಪ್ರತಿವಾದಿ 1 ರಿಂದ 3, ಮುನಿಸ್ವಾಮಿ ಮಗಳು ಲಕ್ಷಮ್ಮ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಂಜಮ್ಮರವರ ತಾಯಿಯ ಹೆಸರು ಚಿಕ್ಕಲಕ್ಷ್ಮಮ್ಮ. ನಂಜಮ್ಮನವರ ತಾಯಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ತೀರಿಕೊಂಡು ಸುಮಾರು 15 ವರ್ಷಗಳಾಗಿರುತ್ತದೆ. ಅವರು ಕೇಸು ಹಾಕುವ 5 ವರ್ಷಗಳ ಮೊದಲು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಲಕ್ಷಮ್ಮ ತೀರಿಕೊಂಡ ನಂತರ ನಾನು, ವಾದಿ, ಪ್ರತಿವಾದಿ 1 ರಿಂದ 4 ಐಟಂ ನಂ.1 ರಿಂದ 8 ರಲ್ಲಿ ಅರ್ಧದಲ್ಲಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ಮುನಿಸ್ವಾಮಿಗೆ ಬಂದಂತಹ ಆಸ್ತಿಯಲ್ಲಿ ಮಾತ್ರ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ.

ದಾನಪತ್ರವನ್ನಾಗಲೀ ಅಥವಾ ಖಾತೆ ಬದಲಾವಣೆಯಾದುದನ್ನಾಗಲೀ ನಾವು ಪ್ರಶ್ನಿಸಿರುವುದಿಲ್ಲ. ವಾದಿಯರಾಗಲೀ, ಪ್ರತಿವಾದಿ 1 ರಿಂದ 3 ರವರಾಗಲೀ ಏನಾದರೂ ವ್ಯವಹಾರ ಮಾಡಬೇಕಾದಲ್ಲಿ ನಿಮಗೆ ಹೇಳಿ ಮಾಡುತ್ತಾರಾ ಅಥವಾ ಇಲ್ಲವಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ಕಾರಣ ನಾವು ಒಟ್ಟಾಗಿಲ್ಲ ಎಂದರೆ ಸರಿಯಲ್ಲ. ನಾರಾಯಣಸ್ವಾಮಿಯವರು ಒಎಸ್ ನಂ.147/2009 ಎಂದು ನಂಜಮ್ಮನ ಮೇಲೆ ಕೇಸು ಹಾಕಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂಜಮ್ಮನವರು ಉತ್ತನೂರು ಗ್ರಾಮದ ಸರ್ವೆ ನಂ.360/1, 240/1, 371/1, 370/2, 364/2, 5/4, 23/3, 245 ಆಸ್ತಿಗಳಿಗೆ ಸಂಬಂಧಿಸಿದಂತೆ ನಾರಾಯಣಸ್ವಾಮಿಯವರಿಗೆ

ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಕ್ರಯಪತ್ರ ಮಾಡಿಕೊಡುವಂತೆ ಕರಾರಿನ ನಿರ್ದಿಷ್ಟ ಪರಿಹಾರ ಕೋರಿ ನಂಜಮ್ಮನ ವಿರುದ್ಧ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಆಸ್ತಿಯು ನಂಜಮ್ಮನ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅವರು ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾರಾಯಣಸ್ವಾಮಿಯವರು ನ್ಯಾಯಾಲಯಕ್ಕೆ ಹಾಜರಾಗದೇ ಇದ್ದ ಕಾರಣ ಸದರಿ ಕೇಸು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಆಸ್ತಿಯನ್ನು ಕಬಳಿಸುವ ಸಲುವಾಗಿ ವಾದಿ, ಪ್ರತಿವಾದಿ 1ರಿಂದ 3 ರವರು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಉತ್ತನೂರು ಗ್ರಾಮ ಮತ್ತು ಅಮ್ಮೇರಹಳ್ಳಿ ಗ್ರಾಮದ ಆಸ್ತಿಗಳನ್ನು ಸೇರಿಸಿರುತ್ತಾರೆ. ವಿಲ್‌ನಾಮೆಯಲ್ಲಿರುವ ಆಸ್ತಿಗಳನ್ನು ಸಹ ಸೇರಿಸಿರುತ್ತಾರೆ. ದಾವಾ ಐಟಂ ನಂ.9 ರಿಂದ 14 ರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.